

# ಪ್ರಕೃತಿಯ ಮೌನ ಸಂದೇಶ

ಸ್ವಾಮಿ ಸುನಿರ್ಮಲಾನಂದ

ನಮ್ಮ ಸುತ್ತಣ ಜಗತ್ತನ್ನು, ಪ್ರಕೃತಿಯ ವಿಸ್ಮಯವನ್ನು ನಾವು ಗಮನಿಸುವುದೇ ಇಲ್ಲ ಎನ್ನಬೇಕು. ಪ್ರತಿಯೊಂದು ನೈಸರ್ಗಿಕ ಕ್ರಿಯೆಯ, ವಸ್ತುವಿನ ಹಿಂದೆ ಎಂಥ ಅದ್ಭುತ ಸಂಗತಿಯಿದೆ ಎಂಬುದನ್ನು ತಿಳಿಸಿಕೊಡುವ ಪ್ರಯತ್ನ ಇಲ್ಲಿದೆ. ರಾಮಕೃಷ್ಣ ಮಹಾಸಂಘದ ಇಂಗ್ಲಿಷ್ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರಾಗಿದ್ದ ಲೇಖಕರು ಪ್ರಸ್ತುತ ವೇದಾಂತ ಸೊಸೈಟಿ, ಹಾಲೆಂಡ್ ಇದರ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ವಾಗ್ಮಿಗಳೂ, ಲೇಖಕರೂ ಆಗಿರುವ ಇವರು ಆಂಗ್ಲ ಭಾಷೆಯಲ್ಲಿ ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ನಿಮ್ಮ ಮನೆ ನಾಲ್ಕನೇ ಅಂತಸ್ತಿನಲ್ಲಿ. ಕೆಳಗಿನಿಂದ ನೀರನ್ನು ಮೇಲಕ್ಕೆ ತೆಗೆದುಕೊಂಡು ಹೋಗಬೇಕು. ಮೆಟ್ಟಿಲು ಹತ್ತುತ್ತಾ ನೀರನ್ನು ತೆಗೆದುಕೊಂಡು ಹೋಗುವುದು ಬಹಳ ಕಷ್ಟದಾಯಕ. ಇತ್ತೀಚೆಗೆ ಲಿಫ್ಟ್ ಇದೆ, ಆದರೆ ಲಿಫ್ಟಿನಿಂದ ನೀರನ್ನು ಮೇಲಕ್ಕೆ ತೆಗೆದುಕೊಂಡು ಹೋಗುವುದು ಅಸಂಭವ. ಅದಕ್ಕಾಗಿಯೇ ಈಗ ಪಂಪ್ ಎಲ್ಲಾ ಕಡೆ ಬಂದುಬಿಟ್ಟಿದೆ. ಒಂದು ಬಟನ್ ಒತ್ತಿದರೆ ಸಾಕು ನೀರು ಮೇಲಕ್ಕೆ ಬರುತ್ತದೆ. ಆದರೆ ವಿದ್ಯುತ್ತಿನ ದರ ಬಹಳ ಹೆಚ್ಚು, ಬಹಳ ಖರ್ಚು. ಪ್ರತಿದಿನವೂ ಪ್ರತಿಯೊಂದು ಅಂತಸ್ತಿಗೂ ಮೇಲೆ ನೀರು ಹೋಗಬೇಕು ಎಂದರೆ ಎಷ್ಟೊಂದು ವೆಚ್ಚ! ಆದರೆ ನಮ್ಮ ಸುತ್ತಮುತ್ತಲೂ ಒಂದು ಅದ್ಭುತವಾದ ವಿಚಿತ್ರವಾದ ಕಾರ್ಯ ನಡೆಯುತ್ತಿದೆ. ವಿದ್ಯುತ್ ಬೇಕಿಲ್ಲ; ಪಂಪ್‌ನ ಆವಶ್ಯಕತೆ ಇಲ್ಲ. ಅನವರತವಾಗಿ ನೀರು ಮೇಲಕ್ಕೆ ಏಳುತ್ತಿದೆ. ಇದೇ ಪ್ರಕೃತಿ ಮಾತೆಯ ವೈಭವ. ಪ್ರಕೃತಿ ಮಾತೆಯ ಪವಾಡ. ಈ ಪ್ರಕೃತಿ ಮಾತೆಯ ಅದ್ಭುತ ವಿಚಿತ್ರವನ್ನು ನಮ್ಮ ಸುತ್ತಮುತ್ತ ನೋಡಿದರೂ ನೋಡದಿದ್ದಂತೆ ನಾವು ಜೀವಿಸುತ್ತಿದ್ದೇವೆ. ಏನದು ವಿಚಿತ್ರ? ವೃಕ್ಷಗಳು. ವೃಕ್ಷಗಳು ಅನವರತ ನೀರನ್ನು ಮೇಲಕ್ಕೆ ಎಳೆಯುತ್ತಿವೆ. ಒಂದು ದೊಡ್ಡ ಎತ್ತರದ ವೃಕ್ಷ ಕಡಿಮೆ ಎಂದರೆ ೫೦೦ ಲೀಟರ್ ನೀರನ್ನು ಮೇಲಕ್ಕೆ ಎಳೆದು ಆಕಾಶಕ್ಕೆ ಒಗೆಯುತ್ತಿದೆ. ಲಕ್ಷ ಲಕ್ಷಗಳು ಸಹಸ್ರಾರು ಸಹಸ್ರಾರು ಲೀಟರ್ ನೀರನ್ನು ಮೇಲಕ್ಕೆ ಆಕಾಶಕ್ಕೆ ಎಸೆಯುತ್ತಿರುತ್ತವೆ. ಈ ವೃಕ್ಷಗಳಿಗೆ ಪಂಪಿನ ಆವಶ್ಯಕತೆ ಇಲ್ಲ. ತಮಗೆ ತಿಳಿದರೆ ಆಶ್ಚರ್ಯವಾಗಬಹುದು, ಈ ಮೇಲೆತ್ತುವ ನೀರು ವೃಕ್ಷಗಳ ಬಳಕೆಗಾಗಿ ಅಲ್ಲ. ವೃಕ್ಷಗಳು ಪಂಪ್‌ಗಳು. ತಮ್ಮ ಉಪಯೋಗಕ್ಕೆ ಸ್ವಲ್ಪ ಮಾತ್ರ ನೀರನ್ನು ಉಳಿಸಿಕೊಂಡು ಉಳಿದ ಎಲ್ಲಾ ನೀರನ್ನು ಆಕಾಶಕ್ಕೆ ಒಗೆಯುತ್ತಿರುತ್ತವೆ, ವೃಕ್ಷಗಳು. ತಮಗೆ ಫೌಂಟನ್ ನೆನಪಿದೆ ತಾನೆ? ಫೌಂಟನ್ನಿನಂತೆ ಅಥವಾ ಹುಲ್ಲಿನ ಮೇಲೆ sprinkler ನಂತೆ ನೀರನ್ನು ಮೇಲಕ್ಕೆ ಎಸೆಯುವುದೇ ವೃಕ್ಷಗಳ ಕೆಲಸ. ಈ ಅದ್ಭುತ ಪ್ರಾಕೃತಿಕ ವಿಚಿತ್ರದ ಹೆಸರು ಟ್ರಾನ್ಸ್‌ಪಿರೇಶನ್ (transpiration).

ಪೃಥ್ವಿಯಲ್ಲಿ ನಡೆಯುತ್ತಿರುವ ನಾನಾ ವೈಚಿತ್ರ್ಯಗಳಲ್ಲಿ ಈ ನೀರನ್ನು ಮೇಲಕ್ಕೆ ಎಳೆದು ಎಸೆಯುವುದು ಒಂದು. ನಮ್ಮ ಶ್ವಾಸ ಪ್ರಶ್ವಾಸಗಳದೇ ಮತ್ತೊಂದು ನಮೂನೆ ಇದು. ಕೋಟಿ ಕೋಟಿ ವೃಕ್ಷಗಳು ನೆಲದಿಂದ ನೀರನ್ನು ಮೇಲಕ್ಕೆ ಎಸೆಯುವುದು. ಈ ನೀರು ಆವಿ ಅಥವಾ ಬಾಷ್ಪವಾಗಿ ಮೇಲಿನ ಟ್ರೋಪೋಸ್ಪಿಯರ್‌ಗೆ ಈ ನೀರಿನ ಕಣಗಳನ್ನು ದಾನ ಮಾಡುತ್ತದೆ. ಸಮುದ್ರ, ನದಿ ಇತ್ಯಾದಿಗಳಿಂದ ಮೇಲೇರುವ ಬಾಷ್ಪಗಳು, ಗಿಡಮರಗಳಿಂದ ಮೇಲೇರುವ ನೀರಿನ ಕಣಗಳು ಎಲ್ಲವೂ ಮೇಘವಾಗುತ್ತವೆ. ಆ ನೀರು ಮತ್ತೆ ಮಳೆಯಾಗಿ ಕೆಳಗಿಳಿದು ಗಿಡಮರಗಳ ಬಾಯಾರಿಕೆ, ನಮ್ಮ ಬಾಯಾರಿಕೆ ಎಲ್ಲವನ್ನೂ ದೂರ ಮಾಡುತ್ತದೆ. ಚಕ್ರದಂತೆ ಕೆಲಸ ಅನವರತ ನಡೆಯುತ್ತಿದೆ. ಸಮುದ್ರದಿಂದಲೂ ನೀರು ಆವಿಯಾಗಿ ಮೇಲೆ ಹೋಗುತ್ತದೆ. ಆದರೆ ಮರಗಳು ಸ್ವಯಂ ಸ್ಫೂರ್ತ

ವಾಗಿ ನೀರನ್ನು ಮೇಲಕ್ಕೆ ಎಸೆಯುವುದು ಒಂದು ಅದ್ಭುತ ವಿಷಯ.

ತಾವು ಈಗ ಭಾವಿಸುತ್ತಿದ್ದೀರಿ: 'ಅಯ್ಯೋ, ನಾವು ಸ್ಕೂಲಿನಲ್ಲಿ ಓದಿದ ಆಸ್ಮಾಸಿಸ್ (osmosis) ನ ಬಗ್ಗೆ ಹೇಳುತ್ತಿದ್ದಾರೆ ಈ ರೀತಿ' ಎಂದು. ಒಂದು ದೃಷ್ಟಿಯಲ್ಲಿ ನಿಜ. ಬೇರುಗಳು ಮಣ್ಣಿನಿಂದ ನೀರನ್ನು ಸೆಳೆಯುವ ಪ್ರಕ್ರಿಯೆಗೆ ಆಸ್ಮಾಸಿಸ್ ಎಂದು ಹೇಳುತ್ತಾರೆ. ಆದರೆ ಈ ನೀರು ಮೇಲಕ್ಕೆ ಹೋಗಿ ಆಕಾಶಕ್ಕೆ ಫೌಂಟನ್ನಿನಂತೆ ಎಸೆಯುವ ವಿಧಾನ ಟ್ರಾನ್ಸ್‌ಪಿರೇಶನ್. ಅದ್ಭುತವೆಂದರೆ ಗಿಡಗಳಿಗೆ ಮತ್ತು ಮರಗಳಿಗೆ ಬೇಕಾಗುವ ನೀರು ಕೇವಲ ೪-೫ ಶತಾಂಶ. ಮಿಕ್ಕೆಲ್ಲ ನೀರು ಆಕಾಶಕ್ಕೆ ಗಿಡಗಳ, ಮರಗಳ ಕೊಡುಗೆ. ಭಾವಿಸಿ ನೋಡಿ, ಜಗತ್ತು ತಲೆಕೆಳಗಾಗಿ ನಿಂತಂತೆ ಕಾಣುತ್ತದೆ. ಯಾವುದು ಮೇಲೆ ಯಾವುದು ಕೆಳಗೆ, ಯಾರಿಗೆ ಗೊತ್ತು! ವೃಕ್ಷಗಳ ಬೇರುಗಳು ಕೆಳಗೋ ಕಾಂಡಗಳು ಕೊಂಬೆಗಳು ಕೆಳಗೋ ದೇವರಿಗೇ ಗೊತ್ತು.

ಸಮುದ್ರ ಕೆಳಗೋ, ಮೇಲ್ಗಡೆಯೋ ತಿಳಿಯದು. Strato sphere ಹಾಗೂ troposphere ಈ ಎರಡು ಮೇಘ ಸೃಷ್ಟಿ ಮಾಡುವ ನಿಲ್ದಾಣಗಳಲ್ಲಿ ಜಲಸಂಚಯ ಮಾಡುವ ಶಕ್ತಿ. ನದಿಗಳ ನೀರು ಹೇಗೆ ಸಮುದ್ರಕ್ಕೆ ಹೋಗುತ್ತವೆಯೋ ವೃಕ್ಷಗಳ ನೀರು ಈ ಎರಡು ನಿಲ್ದಾಣಗಳಿಗೆ ಹೋಗುತ್ತವೆ. ಮತ್ತೊಂದು ಕಡೆ ನೋಡಿ, ನದಿಯ ನೀರು ಒಂದು ನಿಮಿಷವೂ ನಿಲ್ಲದಂತೆ ಸಮುದ್ರದ ಕಡೆಗೆ ಹರಿದು ಹೋಗುತ್ತಿದೆ. ಈ ಪ್ರವಾಹ ಯಾವುದೇ ಪೆಟ್ರೋಲ್ ಅಥವಾ ಡೀಸೆಲ್, ಮೋಟಾರ್‌ಗಳಿಂದಾಗಿ ಅಲ್ಲ. ಪೃಥ್ವಿಯ ಎಲ್ಲಾ ಕಡೆಯೂ ಮೇಲಿನಿಂದಲೇ ಕೆಳಗೆ ನೀರು ಹರಿಯಬೇಕು ಎಂಬ ವಿಧಾನವು ಅಷ್ಟೇನೂ ಸತ್ಯವಲ್ಲ. ನದಿಯ ತೀರದಲ್ಲಿ ಕುಳಿತು ನೋಡಬಹುದು, ಅಷ್ಟೇನೂ ಇಳಿಜಾರಲ್ಲ. ಆದರೂ ಒಂದು ಶಕ್ತಿ ಆ ನೀರನ್ನು ಸಮುದ್ರದಡಿಗೆ ಕೊಂಡೊಯ್ಯುತ್ತಿದೆ.

ಈ ವೈಜ್ಞಾನಿಕ ಸತ್ಯಗಳಿಗೆ ಇತ್ತೀಚಿನ ವಿಜ್ಞಾನಿಗಳು ವಿವರಣೆ ನೀಡುತ್ತಾರೆ. ಆದರೆ ಪುರಾತನ ಕಾಲದಲ್ಲಿ ನಮ್ಮ ಹಿಂದೂ ವಿಜ್ಞಾನಿಗಳು ಕೂಡ ಇವುಗಳ ಬಗ್ಗೆ ಹೇಳಿದ್ದರು. ಇಂದು ನಾವು ಶಾಲೆಯಲ್ಲಿ ಯಾವ ಆಸ್ಮಾಸಿಸ್ ನ ಬಗ್ಗೆ ಓದುತ್ತೇವೆಯೋ, ಅದೇ ಆಸ್ಮಾಸಿಸ್‌ನ ಕುರಿತಾಗಿ ನಾಲ್ಕೈದು ಸಾವಿರ ವರ್ಷಗಳ ಹಿಂದೆ ಕಣಾದ ಮಹರ್ಷಿಗಳು ತಮ್ಮ 'ವೈಶೇಷಿಕ ಸೂತ್ರ'ಗಳಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ವೈಶೇಷಿಕ ಸೂತ್ರದ ಪಂಚಮ ಅಧ್ಯಾಯದ ದ್ವಿತೀಯ ಭಾಗದಲ್ಲಿ ಕಣಾದ ಮಹರ್ಷಿಗಳು ಒಂದು ಅದ್ಭುತವಾದ ಗುರುತ್ವ ಪೂರ್ಣವಾದ ಸೂತ್ರವನ್ನು ರಚಿಸಿದ್ದಾರೆ: **ನಾಡ್ಯ: ವಾಯು ಸಂಯೋಗಾತ್ ಆರೋಹಣಂ. ನೋದನ ಪೀಡನಾತ್ ಸಂಯುಕ್ತ ಸಂಯೋಗಾತ್ ಚ. ವೃಕ್ಷ ಅಭಿಸರ್ಪಣಂ ಇತಿ ಅದೃಷ್ಟ ಕಾರಿತಮ್.**

ಸಂಸ್ಕೃತ ಭಾಷೆ ಸಮೃದ್ಧವಾದ ಭಾಷೆ. ಒಂದೇ ಶಬ್ದಕ್ಕೆ ಬಹಳ ಅರ್ಥಗಳು ಇರಬಹುದು. ಪೂಜ್ಯ ಸ್ವಾಮಿ ವಿವೇಕಾನಂದರು ಹೇಳುವಂತೆ ವಾಯು ಎಂದರೆ ಕೇವಲ ಗಾಳಿಯಲ್ಲ, ವಾಯು ಅಂದರೆ ಸ್ಪಂದನ, ವೈಬ್ರೇಶನ್ ಇತ್ಯಾದಿ ನಾನಾ ಅರ್ಥಗಳಿವೆ. ಕಣಾದ ಮಹರ್ಷಿಗಳು ತಮ್ಮ ಸೂತ್ರದಲ್ಲಿ ಹೇಳುತ್ತಾರೆ, ಈ ಸ್ಪಂದನದ ಕಾರಣ ನಾಡಿಗಳು ನೀರನ್ನು ನೆಲದಿಂದ ಆಕಾಶದೆಡೆಗೆ ಗಿಡಗಳಲ್ಲಿ ಮತ್ತು ಮರಗಳಲ್ಲಿ ಎಳೆಯುತ್ತವೆ. ಅಂದಿನ ಕಾಲದಲ್ಲಿ ಗಿಡಗಳ ಒಳಗೆ ನೀರನ್ನು ಎಳೆಯುವ ನಾಡಿಗಳಿಗೆ ಪೈಪ್‌ಗಳಂತೆ ಎಂದು ಹೇಳಿದ್ದರೆ ಎಲ್ಲರೂ ಅಪಹಾಸ್ಯ ಮಾಡಿರಬಹುದು. ಆದರೆ ಇಂದು ವಿಜ್ಞಾನಿಗಳು ಇದು ಸತ್ಯ ಎನ್ನುತ್ತಾರೆ. ಇದು ಭಾರತೀಯ ಹಿಂದೂಧರ್ಮದ ವೈಜ್ಞಾನಿಕತೆಯ ಮಹನೀಯತೆ. ಕಲ್ಲು ಮಣ್ಣು ತುಂಬಿದ ನೆಲದಿಂದ ನೀರು ಮೇಲಕ್ಕೆ ಹೋಗುವ ಕಾರಣ ನೋದನ ಪೀಡನ ಮತ್ತು ಸಂಯುಕ್ತ ಸಂಯೋಗ ಎಂದು ವೈಜ್ಞಾನಿಕ ಭಾಷೆಯನ್ನು ಬಳಸಿದ್ದಾರೆ ಕಣಾದ ಮಹರ್ಷಿಗಳು. ಅದೃಷ್ಟವಾದರೂ, ಅಂದರೆ ಕಣ್ಣಿಗೆ ಅಗೋಚರವಾದರೂ ನಾನಾ ಶಕ್ತಿಗಳು ಕೆಲಸ ಮಾಡುತ್ತಿವೆ ಎಂದು ಇದರ ಅರ್ಥ.

ಇಳಿಜಾರು ಇರಲಿ, ಇರದಿರಲಿ ನೀರು ಒಂದೇ ವೇಗದಿಂದ ಶತಶತಮಾನಗಳಿಂದ ಸಮುದ್ರದ ಕಡೆಗೆ ನದಿಗಳಿಂದ ಹರಿದು ಹೋಗುತ್ತಿದೆ. ಅದರ ಪಕ್ಕದಲ್ಲಿ ನೀವು ಅದೇ ರೀತಿಯ ಒಂದು ಕಾಲುವೆ ಮಾಡಿ ಅದರಲ್ಲಿ ನೀರು ಹಾಕಿ ನೋಡಿ. ಸ್ವಲ್ಪ ದೂರ ಹೋದ ಮೇಲೆ ನಿಂತುಬಿಡುತ್ತದೆ. ಯಾವುದೇ ಯಂತ್ರದ ಡೀಸೆಲ್ಲಿನ ಪೆಟ್ರೋಲಿನ ಸಹಾಯವೂ ಇಲ್ಲದೆ ಈ ರೀತಿ ಅದ್ಭುತವಾಗಿ ಕೋಟಿ ಕೋಟಿ ಗ್ಯಾಲನ್ ಪ್ರತಿ ಗಂಟೆ ಹರಿಯುವುದು ವಿಶ್ವದ ಒಂದು ಆಶ್ಚರ್ಯ. ನಮ್ಮ ಶರೀರದೊಳಗೆ ಧಮನಿಗಳಲ್ಲಿ ರಕ್ತ ಹರಿಯುವುದು ಅದೇ ರೀತಿ. ನೀವು ತಲೆಕೆಳಕಾಗಿ ನಿಂತರೂ ಒಂದೇ. ಮತ್ತೊಂದು ತಮಾಷೆಯ ವಿಷಯ ಸಮುದ್ರದ ಜೀರ್ಣ ಶಕ್ತಿ ಅದೆಷ್ಟು ಅಂದರೆ ಪ್ರತಿ ಸೆಕೆಂಡಿಗೆ ಕೋಟಿ ಗ್ಯಾಲನ್ ನೀರು ಒಳಗೆ ಬಂದರೂ ಉಕ್ಕಿ ಹರಿಯುವುದಿಲ್ಲ. ತಾವು ಗಮನಿಸಿ ನೋಡಿದರೆ ಈ ರೀತಿ ಬಹಳ ವಿಷಯಗಳಿವೆ ಪ್ರಕೃತಿಯಲ್ಲಿ. ರಾಂಗ್ ಸೈಡ್ ಕಾರು ಚಲಿಸಿದಂತೆ ವಿಪರೀತ ದಿಕ್ಕಿನಲ್ಲಿ ಕೆಲಸ ನಡೆಯುತ್ತಲೇ ಇದೆ. ಇದರಿಂದ ಏನು ಕಲಿಯಬಹುದು? ನಾವು ಪ್ರಕೃತಿಯ ನಿಯಮಗಳ ವಿರುದ್ಧ ಹೋರಾಡಬಹುದು. ನಮ್ಮ ಶರೀರವನ್ನು ಸ್ವಾಸ್ಥ್ಯಪೂರ್ಣವಾಗಿಡಬಹುದು. ಪ್ರಕೃತಿಯ ನಿಯಮದ ಅನುಸಾರ ನಮಗೆ ಬಂದಿರುವ ಸಮಸ್ಯೆಗಳು ಶಾಶ್ವತ ಎಂದು ಭಾವಿಸಬಾರದು. ಎದುರಿಸಿ ನಡೆಯಬೇಕು.

ಸಾಧಕರ ಜೀವನ ಇದೇ ರೀತಿ ಇರಬೇಕು ಎಂದು ಗುರುಜನರು ತಿಳಿಸುತ್ತಾರೆ. ಸಂಸಾರದ ಅಲೆಗಳ ವಿರುದ್ಧವಾಗಿ ಈಜುವುದು ಸಾಧಕನ ಕರ್ತವ್ಯ. ಯುದ್ಧದಲ್ಲಿ ಸೈನಿಕರು ಹೆದರಿ ಬೆನ್ನು ತೋರಿಸುವುದಿಲ್ಲ. ಅದೇ ರೀತಿ ಸಾಧಕರು 'ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ' ಎನ್ನುವ ಮಂತ್ರವನ್ನು ಮನಸ್ಸಿನಲ್ಲಿ ಸರ್ವದಾ ಇಟ್ಟುಕೊಂಡು ಪ್ರಕೃತಿಯ ವಿರುದ್ಧ ಗತಿಯಲ್ಲಿ ನಡೆಯುತ್ತಾರೆ. ಮೇಲೆ ಹೇಳಿದ ವೃಕ್ಷಗಳ ಕಥೆಯ ಮತ್ತೊಂದು ಪಾಠ ಏನೆಂದರೆ, 'ವೀರಭೋಗ್ಯಾ ವಸುಂಧರಾ.' ಯಾರು ಹೋರಾಡುತ್ತಾರೋ ಅವರಿಗೇ ಜಯ. ಅವರಿಗೆ ಈ ಪೃಥ್ವಿಯ ಸಮಸ್ತ

ಸಂಪತ್ತುಗಳು. ಯಾರು, 'ಓ ಪ್ರಕೃತಿಯ ಇಚ್ಛೆ ಹೇಗಿದೆಯೋ ಹಾಗೆ ನಡೆಯಲಿ, ಭಗವಂತನೇ ಇಚ್ಛೆ ಇದ್ದ ಹಾಗೆ ನಡೆಸಲಿ' ಎಂದು ಮೊಸಳೆ ಕಣ್ಣೀರು ಹರಿಸುತ್ತಾ ಕಷ್ಟ ಕಷ್ಟ ಎಂದು ಹೇಳುತ್ತಾ ಸೋಫಾದ ಮೇಲೆ ಕುಳಿತು ಟೆಲಿವಿಷನ್ ನೋಡುತ್ತಾ ಏನೊಂದೂ ಕೆಲಸ ಮಾಡದಿದ್ದರೆ ಸುಖವೂ ಇಲ್ಲ, ಜಯವೂ ಇಲ್ಲ, ಭೋಗವೂ ಇಲ್ಲ.

ಒಂದು ಚಿಕ್ಕ ಉದಾಹರಣೆ ಕೊಟ್ಟರೆ ಈ ವಿಷಯ ಮತ್ತೂ ಸ್ಪಷ್ಟವಾಗುತ್ತದೆ. ಕ್ರಿಕೆಟ್‌ನಲ್ಲಿ ಕೆಲವೊಂದು ಪ್ರಚಲಿತ ನಿಯಮಗಳಿವೆ. ಈ ರೀತಿಯ ಚೆಂಡು ಬಂದರೆ ಈ ರೀತಿ ಹೊಡೆಯಬೇಕು. ಬೌಲರ್ ಈ ರೀತಿ ಚೆಂಡು ಎಸೆದರೆ ಈ ರೀತಿ ಆಡಬೇಕು. ಇತ್ಯಾದಿ. ಆದರೆ ಇಂಥ ಚೆಂಡು ಬಂದರೆ ಔಟ್ ಆಗಬೇಕು ಎಂಬ ಮಾತು ಪ್ರಚಲಿತವಾಗಿದ್ದರೂ ಔಟ್ ಆಗಬೇಕಿಲ್ಲ. ಧೈರ್ಯದಿಂದ ಎದುರಿಸಬೇಕು. ೬ ರನ್ನು ಹೊಡೆಯಬೇಕು. ಇಲ್ಲವಲ್ಲ! ಈ ರೀತಿಯ ಬಾಲ್ ಬಂದರೆ ಔಟ್ ಆಗಬೇಕು ಎಂದು ತನ್ನದೇ ನಿಯಮ ಎಂದರೆ ನಿಮ್ಮನ್ನು ತೆಗೆದುಹಾಕಿಬಿಡುತ್ತಾರೆ. ಪ್ರಕೃತಿಯ ವಿರುದ್ಧ ಹೋರಾಡಿದರೆ ಇಲ್ಲಿ ಸಲ್ಲುತ್ತೇವೆ, ಇಲ್ಲದಿದ್ದರೆ ಸಲ್ಲುವುದಿಲ್ಲ.

ವೃಕ್ಷಗಳಿಗೆ ತಮ್ಮ ಆರೋಗ್ಯ ನೋಡಿಕೊಂಡರೆ ಸಾಕಾಗಿತ್ತು. ಆದರೆ ವೃಕ್ಷಗಳು ದಿನ ರಾತ್ರಿ ಆಕಾಶಕ್ಕೆ ನೀರನ್ನು ಎಸೆಯುವ ದೊಡ್ಡ ಕೆಲಸ ಮಾಡುತ್ತಿವೆ. ಈ ರೀತಿ ಕೆಳಗಿನಿಂದ ನೀರನ್ನು ಎಳೆದು stratosphere ಗೆ ಎಸೆಯುವುದು ಸಾಧಾರಣ ಕೆಲಸವಲ್ಲ. ಕೆಲವೊಂದು ಜಲ ಎತ್ತುವ ಪಂಪುಗಳ ಕೆಲಸವನ್ನು ವೃಕ್ಷ ಮಾಡುತ್ತಿದೆ, ಅನವರತ. ಇದರ ಅರ್ಥವೇನು? ಇದರಿಂದ ಏನು ಪಾಠ ಕಲಿಯಬಹುದು? ನಿಃಸ್ವಾರ್ಥತೆ. ನಮ್ಮ ಸುತ್ತಮುತ್ತ ಎಲ್ಲ ಕಡೆಯೂ ಒಂದು ನಿಃಸ್ವಾರ್ಥತೆಯ ಪರಿಸರ. ಎಲ್ಲಾ ಪರರಿಗಾಗಿ. ಸೂರ್ಯೋದಯವಾಗುವುದು ಸೂರ್ಯನಿಗಲ್ಲ, ನಮಗಾಗಿ. ಗಿಡ ಮರಗಳು ದೊಡ್ಡವಾಗುವುದು ತಮಗಾಗಿ ಅಲ್ಲ, ನಮಗಾಗಿ. ವೃಕ್ಷಗಳು ನೀರನ್ನು ಕೆಳಗಿನಿಂದ ಮೇಲಕ್ಕೆ ಸಾಗಿಸುವುದು ತಮಗಾಗಿ ಅಲ್ಲ, ವಿಶ್ವಕ್ಕಾಗಿ. ಹಣ್ಣು ಹೂಗಳನ್ನು ಕೊಡುವುದು ಇತರರಿಗಾಗಿ. ಈ ಪೃಥ್ವಿಯಲ್ಲಿ ಮನುಷ್ಯ ಮಾತ್ರ ಸ್ವಾರ್ಥಿ. ಎಲ್ಲಿ ಮನುಷ್ಯರು ಹೆಚ್ಚು ಅಲ್ಲಿ ವೃಕ್ಷಗಳು ಕಡಿಮೆ, ಗಿಡಗಳು ಕಡಿಮೆ, ಆದರೆ ಸರ್ವತ್ರ ಸಿಮೆಂಟು ಇಟ್ಟಿಗೆಗಳ ಅರಣ್ಯ. ಮನುಷ್ಯ ಈ ಪೃಥಿವಿಯ ಕ್ಯಾನ್ಸರ್ ಇದ್ದಹಾಗೆ. ತನ್ನ ಸ್ವಾರ್ಥಕ್ಕಾಗಿ ಎಲ್ಲವನ್ನೂ ಬಳಸುತ್ತಾನೆ. ಹೀಗಿರುವಾಗ ನಿಃಸ್ವಾರ್ಥತೆಯಿಂದ ಜೀವನ ನಡೆಸಲು ಸಾಧ್ಯವೆ? ನನಗೆ ಎಷ್ಟು ಕಡಿಮೆ ಬೇಕು ಅದನ್ನು ಮಾತ್ರ ತೆಗೆದುಕೊಂಡು ಉಳಿದಿದ್ದನ್ನೆಲ್ಲಾ ಸಮಾಜಕ್ಕೆ ಇತರರಿಗೆ ಕೊಡಬಲ್ಲೆನೇ ಎಂಬುದನ್ನು ನೋಡಬೇಕು. ಈ ಪಾಠ ವೃಕ್ಷಗಳಿಂದ ಕಲಿಯಬಹುದು. ಹಿಂದೆಯೇ ಹೇಳಿದಂತೆ ಪ್ರತಿದಿನ ಸಾವಿರ ಲೀಟರ್ ನೀರನ್ನು ಮೇಲಕ್ಕೆ ಎಳೆದರೂ ಮರಗಳು ಉಪಯೋಗಿಸುವುದು ಐದು ಶತಾಂಶ ಮಾತ್ರ.

ಉಪನಿಷತ್ತುಗಳ ಬ್ರಹ್ಮಚಾರಿಯೊಬ್ಬನಿಗೆ ಪ್ರಕೃತಿಯ ಹಲವಾರು ಅಂಗಗಳು ಗುರುಗಳಂತೆ. ಹಕ್ಕಿಗಳು, ಮೀನು ಇತ್ಯಾದಿ. ನಮಗೂ ಕೂಡ ಕಲಿಯುವ ಆಸಕ್ತಿ ಇದ್ದರೆ ಸುತ್ತಮುತ್ತಲೂ ಗುರುಗಳಿದ್ದಾರೆ. ಮೌನವಾಗಿ ನಮಗೆ ಪಾಠ ಕಲಿಸಲು ಸಿದ್ಧರಾಗಿದ್ದಾರೆ. ನಾವೇಕೆ ಪಾಠ ಕಲಿಯಬೇಕು? ಭಗವಾನ್ ಶ್ರೀಕೃಷ್ಣ ಅರ್ಜುನನಿಗೆ ಒಂದು ಮಾತು ಹೇಳಿದ್ದಾನೆ. ಅತ್ಯಂತ ಗುರುತ್ವಪೂರ್ಣವಾದ ಮಾತಿದು: ''**ಇಷ್ಟಾನ್ ಭೋಗಾನ್ ಹಿ ವೋ ದೇವಾಃ ದಾಸ್ಯಂತೇ ಯಜ್ಞಭಾವಿತಾಃ. ತೈಃ ದತ್ತಾನ್ ಅಪ್ರದಾಯೈಭ್ಯೋ ಯೋ ಭುಂಕ್ತೇ, ಸ್ತೇನ ಏವ ಸಃ.**'' *(ಗೀತೆ, ೩.೧೨).* ನಾವು ಸಂಪಾದಿಸಿದ ವಸ್ತು ವಿಷಯ ಜ್ಞಾನಗಳನ್ನು ಇತರರಿಗೆ ಕೊಡದೆ ಸ್ವಾರ್ಥಿಗಳಾಗಿ ನಾವೇ ಉಪಯೋಗಿಸೋಣ ಎಂದು ಚಿಂತಿಸಿದರೆ ನಾವು ಕಳ್ಳರಾಗುತ್ತೇವೆ.

ಈ ಲೇಖನದ ಶುರುವಿನಿಂದ ಮರಗಳ ನೀರೆತ್ತುವ ಮಹಿಮೆಯ ಬಗ್ಗೆ ಹೇಳಲಾಗಿದೆ. ಪೃಥ್ವಿಯ ಮಡಿಲಿನಿಂದ ನೀರನ್ನು ಮೇಲಕ್ಕೆ ಸೆಳೆದು ಎಸೆಯಲು ಉಪಯೋಗಿಸುವುದು ಮರದೊಳಗಿರುವ ಕೊಳವೆಗಳನ್ನು. ಈ ಕೊಳವೆಗಳು ಎಷ್ಟು ಶುದ್ಧವಾಗಿರುತ್ತವೋ ಅಷ್ಟು ಚೆನ್ನಾಗಿ ನೀರನ್ನು ಮೇಲೆತ್ತಬಲ್ಲವು. ಮನೆಯ ನೀರಿನ ಪೈಪಿನಲ್ಲಿ ಮಣ್ಣು ತುಂಬಿದರೆ ನೀರು ಹರಿಯುವುದಿಲ್ಲ. ನಮ್ಮ ಜೀವನವು ಶುದ್ಧವಾದ ಕೊಳವೆಯಂತೆ ಆಗಬೇಕು. ಆಗಲೇ ಆನಂದ. ಇದನ್ನೇ ಶ್ರೀರಾಮಕೃಷ್ಣರು, ಮಹಾಮಾತೆ ಶ್ರೀಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರು ನಮಗೆ ತಿಳಿಸುವುದು.

ನದಿಯ ನೀರು ನಿರಂತರವಾಗಿ ಹರಿಯುತ್ತಿರಬೇಕು. ಅದಕ್ಕೇನಾದರೂ ಅಡ್ಡಿಯಾದರೆ ಆ ನೀರು ಉಕ್ಕಿ ಫಸಲನ್ನು ಮನೆಯನ್ನು ಹಾಳು ಮಾಡಬಹುದು. ಎಲ್ಲಾ ಅಡ್ಡಿಗಳನ್ನು ತಡೆಗಳನ್ನು ಮುರಿಯುತ್ತಿರಬೇಕು. ನಮ್ಮೊಳಗಿರುವ ಅಹಂಕಾರವೇ ಸ್ವಾಭಿಮಾನವೇ ಭಗವಂತನ ಕೃಪೆ ನಮ್ಮಿಂದ ಹರಿಯಲು ದೊಡ್ಡ ಅಡ್ಡಿ. ಅದನ್ನು ಮುರಿದರೆ, ಶರಣಾಗತರಾದರೆ ನಾವು ಭಗವಂತನ ಈ ಮಹಾಯಜ್ಞದ ಪಾಲುದಾರರಾಗುತ್ತೇವೆ. ❋

> ''ಭರತಖಂಡದಲ್ಲಿ ಪ್ರಪಂಚವನ್ನೇ ಚಲಿಸಬಲ್ಲ ಆಧ್ಯಾತ್ಮಿಕ ಮಹಾವ್ಯಕ್ತಿಗಳು ಇಲ್ಲದ ಯಾವುದಾದರೂ ಕಾಲವನ್ನು ತೋರಿಸಿ ಎಂದು ನಾನು ಸವಾಲು ಹಾಕುತ್ತೇನೆ. ಭಾರತದ ಕೆಲಸ ಆಧ್ಯಾತ್ಮಿಕತೆ. ಇದು ರಣಕಹಳೆಯ ಕೋಲಾಹಲದಿಂದಾಗಲಿ, ಸೈನ್ಯಗಳ ಚಲನವಲನಗಳಿಂದಾಗಲಿ ಸಾಧ್ಯವಿಲ್ಲ. ಸಪ್ಪಳವಿಲ್ಲದೆ, ಯಾರಿಗೂ ಗೋಚರಿಸದೆ ಹಿಮಮಣಿ ಜಗದ ಮೇಲೆ ಬಿದ್ದರೂ ಪ್ರಪಂಚದ ಶ್ರೇಷ್ಠತಮ ಪುಷ್ಪಗಳನ್ನು ವಿಕಾಸ ಮಾಡುವಂತಿದೆ ಭಾರತದ ಪ್ರಭಾವ.''
>
> — ಸ್ವಾಮಿ ವಿವೇಕಾನಂದ